ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

---

ಸಂಖ್ಯೆ: ಎಡಿಎಂ-2[4]ಮ.ಶಿ.ಹ-22/2020-21 ದಿನಾಂಕ:-08-01-2021

## ಸುತ್ತೋಲೆ

ವಿಷಯ: ಪ್ರಾಥಮಿಕ ಶಾಲೆಯಲ್ಲಿ 1 ರಿಂದ 8 ನೇ ತರಗತಿಯವರೆಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವ ಕುರಿತು

ಉಲ್ಲೇಖ: : 1. ಈ ಕಛೇರಿ ಸುತ್ತೋಲೆ ಸಂಖ್ಯೆ: ಅ1 (3) ಪ್ರವೇಶ/76/2003-04 ದಿನಾಂಕ: 18-06-2003

2. ಮಾನ್ಯ ನ್ಯಾಯಾಲಯದ ಪ್ರಕರಣ ಸಂಖ್ಯೆ: ಡಬ್ಲ್ಯೂಪಿ-10096/2020

*******

ಪ್ರಾಥಮಿಕ ಶಾಲಾ ಸಾರ್ವತ್ರೀಕರಣ ಕುರಿತಂತೆ 6 ರಿಂದ 14 ವರ್ಷ ವಯೋಮಿತಿಯ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಜನನ ಪ್ರಮಾಣ ಪತ್ರ ಮತ್ತು ವರ್ಗಾವಣೆ ಪತ್ರಗಳನ್ನು ಮಕ್ಕಳ ಪೋಷಕರ/ಸಂಬಂಧಿಕರ ಬಳಿ ಲಭ್ಯವಿಲ್ಲದಿದ್ದಲ್ಲಿ, ಶಾಲೆಗೆ ದಾಖಲಾಗಲು ಬರುವ ಮಗುವಿನಿಂದ ದಾಖಲೆಗಳನ್ನು ಕೊಡುವಂತೆ ಒತ್ತಾಯಿಸಬಾರದೆಂದು ಈಗಾಗಲೇ ಎಲ್ಲಾ ಶಾಲಾ ಮುಖ್ಯಸ್ಥರುಗಳಿಗೆ ಉಲ್ಲೇಖ-1ರಲ್ಲಿ ತಿಳಿಸಲಾಗಿರುತ್ತದೆ. ಪೋಷಕರಿಗೆ ಈ ದಾಖಲೆಗಳು ಲಭ್ಯವಿಲ್ಲದ ಕಾರಣ ಮಕ್ಕಳು ಶಾಲೆಗೆ ಸೇರುವ ಆಸಕ್ತಿಯನ್ನು ಕಳೆದುಕೊಂಡು ಶಾಲೆಯಿಂದ ಹೊರಗುಳಿಯುವಂತಾಗುತ್ತದೆ.

ಈ ಹಿನ್ನೆಲೆಯಲ್ಲಿ 6 ರಿಂದ 14 ವರ್ಷ ವಯೋಮಿತಿಯ ಶಾಲೆಯಿಂದ ಹೊರಗುಳಿದ ಮಕ್ಕಳನ್ನು - ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಗೊಂಬೆ ಮತ್ತು ಹೂವುಗಳನ್ನು ಮಾರುವ ಮಕ್ಕಳು, ಪರಿತ್ಯಕ್ತ ಮಕ್ಕಳು, ಬೀದಿ ಮಕ್ಕಳು, ಅನಾಥ ಮಕ್ಕಳು ಇತ್ಯಾದಿ ಮಕ್ಕಳನ್ನು ಗುರುತಿಸಿ ಪುನರ್ವಸತಿ ನೀಡಲು ಉಲ್ಲೇಖ-2ರಲ್ಲಿ ತಿಳಿಸಲಾಗಿದೆ.

ಗುರುತಿಸಿರುವ ಇಂಥಹ ಮಕ್ಕಳನ್ನು ಶಾಲೆಗೆ ದಾಖಲು ಮಾಡಿಕೊಳ್ಳುವ ಸಂದರ್ಭದಲ್ಲಿ, ಜನನ ಪ್ರಮಾಣ ಪತ್ರ ಮತ್ತು ವರ್ಗಾವಣೆ ಪತ್ರಗಳನ್ನು ಮಕ್ಕಳ ಪೋಷಕರ / ಸಂಬಂಧಿಕರ ಬಳಿ ಲಭ್ಯವಿಲ್ಲದಿದ್ದಲ್ಲಿ, ಶಾಲೆಗೆ ದಾಖಲಾಗಲು ಬರುವ ಮಗುವಿನಿಂದ ದಾಖಲೆಗಳನ್ನು ಕೊಡುವಂತೆ ಒತ್ತಾಯ ಮಾಡದೆ, ಶಾಲಾ ಮುಖ್ಯವಾಹಿನಿಗೆ ತರುವ ದೃಷ್ಟಿಯಿಂದ ಶೈಕ್ಷಣಿಕ ವರ್ಷದ ಮಧ್ಯದಲ್ಲಿಯೂ ಸಹ ಪ್ರಾಥಮಿಕ 1 ರಿಂದ 8 ನೇ ತರಗತಿಯ ಪ್ರವೇಶ ನೀಡಲು ತಿಳಿಸಿದೆ.

ಪ್ರವೇಶ ಪಡೆಯಲು ಬರುವ ಮಕ್ಕಳನ್ನು ವಯಸ್ಸು ಮತ್ತು ಕಲಿಕೆಯ ಆಧಾರದ ಮೇಲೆ ಸೂಕ್ತ ತರಗತಿಗೆ ದಾಖಲು ಮಾಡಿ ಸದರಿ ಮಕ್ಕಳಿಗೆ ಪರಿಹಾರ ಬೋಧನೆಯನ್ನು ನೀಡಿ ಶಾಲಾ ಮುಖ್ಯವಾಹಿನಿಗೆ ತರಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು-01 ಇವರಿಗೆ ಸೂಕ್ತಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಅಭಿವೃದ್ಧಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು/ಕ್ಷೇತ್ರಸಮನ್ವಯಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತಕ್ರಮಕ್ಕಾಗಿ
4. ಕಛೇರಿ ಪ್ರತಿ